'ಬ್ಯಾಕ್ ಟು ರೂಟ್ಸ್' ಅನ್ನೋ ಹಾಗೆ ವಯಸ್ಕರಿಂದ ಹಿಡಿದು ಪುಟಾಣಿ ಮಕ್ಕಳವರೆಗೂ ಈ ಸಾಂಪ್ರದಾಯಿಕ ಉಡುಗೆಯೇ ಅಚ್ಚುಮೆಚ್ಚು. ಯುಗಾದಿ ಹಬ್ಬಕ್ಕೆ ಸಾಂಪ್ರದಾಯಿಕತೆಗೆ ಆಧುನಿಕ ಸ್ಪರ್ಶ ನೀಡಿದ ಫ್ಯೂಷನ್ ಉಡುಗೆಗಳನ್ನು ತೊಟ್ಟು ಸಂಭ್ರಮಿಸಿ.

# ಹಳೆ ಬೇರು ಹೊಸ ಚಿಗುರಿನ ಫ್ಯೂಷನ್!



■ ಸುರೇಖಾ ಹೆಗಡೆ

'ಸಂಸಾರದಲ್ಲಿ ಲವಲವಿಕೆ, ಸಂಭ್ರಮ ಇರುವುದಕ್ಕೆ ಹೆಣ್ಣುಮಕ್ಕಳೇ ಕಾರಣ. ಅವರಿಗಿರುವ ಜೀವನೋತ್ಸಾಹ ಪುರುಷರಿಗಿಲ್ಲ' ಅಂತ ಹಾಸ್ಯ ಕಲಾವಿದ ಪ್ರಾಣೇಶ್ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು. ಇದು ತಮಾಷೆಗಾಗಿ ಹೇಳಿದ್ದಾದರೂ ಬದುಕಿನ ಸತ್ಯ ಹೌದಲ್ವಾ? ಎಷ್ಟೇ ತಲೆಬಿಸಿ ಇದ್ದರೂ, ದೈಹಿಕವಾಗಿ ಸೋತಿದ್ದರೂ ಹೆಂಗಳೆಯರು ಮಾತ್ರ ಸಣ್ಣ ಪುಟ್ಟ ಕಾರಣ ಹುಡುಕಿ ಸಂಭ್ರಮಿಸುತ್ತಲೇ ಇರುತ್ತಾರೆ. ಹಬ್ಬ ಹರಿದಿನಗಳು ಬಂದರಂತೂ ಪಾದರಸದಂತೆ ಚುರುಕಾಗಿಬಿಡುತ್ತಾರೆ. ಮನೆ ಸ್ವಚ್ಛಗೊಳಿಸುವುದರಿಂದ ಹಿಡುದು, ತರಹೇವಾರಿ ಅಡುಗೆ ಮಾಡುವುದೂ ಅವರ ಹುಮ್ಮಸ್ಸಿನ ಪಾಲೇ. ಜೊತೆಗೆ ಕಾಲಕ್ಕೆ ತಕ್ಕಂತೆ, ಟ್ರೆಂಡಿ ದಿರಿಸುಗಳನ್ನು ತೊಟ್ಟು ಶೃಂಗಾರಗೊಳ್ಳುತ್ತಾರೆ. ತಾವಷ್ಟೇ ಅಲ್ಲ ಮನೆ, ಗಂಡ, ಮಕ್ಕಳು ಎಲ್ಲರೂ ಚೆಂದಾಗ ತಯಾರಾಗುವಂತೆ ಮಾಡುತ್ತಾರೆ.

ಹೌದು, ಈಗಲೂ ಅಷ್ಟೇ, ಬರಲಿರುವ ಯುಗಾದಿ ಹಬ್ಬಕ್ಕೆ ಹೇಗೆ ತಯಾರಾಗಬೇಕು ಎಂದು ಹೆಚ್ಚಿನ ಮನೆಗಳಲ್ಲಿ ಹೆಣ್ಣುಮಕ್ಕಳು ಯೋಚಿಸಿ ತಯಾರಿಯನ್ನೂ ಶುರು ಮಾಡಿಕೊಂಡು ಬಿಟ್ಟಿರುತ್ತಾರೆ. ಹೊಸ ಹೊಸ ಬಟ್ಟೆಗಳ ಖರೀದಿ, ಫ್ಯಾಷನ್ ಟ್ರೆಂಡ್‌ಗಳ ಬಗ್ಗೆಯೂ ಚರ್ಚೆಯೂ ಶುರುವಾಗಿರಬಹುದು. ಮಾರುಕಟ್ಟೆ ಆಕ್ರಮಿಸಿರುವ ತರಹೇವಾರಿ ದಿರಿಸುಗಳತ್ತ ಆಕರ್ಷಿತರೂ ಆಗಿರಬಹುದು. ಅಂದ ಹಾಗೆ ಈ ಬಾರಿ ಯುಗಾದಿಗೆ ಯಾವ ಬಗೆಯ ಫ್ಯಾಷನ್ ಹೆಚ್ಚು ಸದ್ದು ಮಾಡುತ್ತಿದೆ ಗೊತ್ತೇ?

### ಸಾಂಪ್ರದಾಯಿಕ ದಿರಿಸು

ಫ್ಯಾಷನ್ ಜಗತ್ತಲ್ಲಿ ಅದೆಷ್ಟೇ ವಿಧದ ದಿರಿಸುಗಳು ಬಂದರೂ ಎಂದಿಗೂ ಮಾಸದ ಟ್ರೆಂಡ್ ಅಂದ್ರೆ ಅದು ಸೀರೆಗಳದ್ದು. ಅದು ರೇಷ್ಮೆ, ಶಿಫಾನ್, ಸ್ಯಾಟಿನ್ ಅಥವಾ ಯಾವುದೇ ರೀತಿಯ ಹಗುರ ಬಟ್ಟೆಯ ಸೀರೆಯಾದರೂ ಸರಿ ಹಬ್ಬ ಹರಿದಿನಗಳು ಎಂದರೆ ಹೆಂಗಳೆಯರಿಗೆ ಸೀರೆ ಬೇಕೇ ಬೇಕು. ಗಾಢ ಬಣ್ಣದ ಸೀರೆಗಳು ಎಂದಿಗೂ ಟ್ರೆಂಡ್‌ನಲ್ಲಿಯೇ ಇರುತ್ತವೆ. ಆದರೆ ಈ ಬಾರಿ ಎಲ್ಲರ ಮನಸೂರೆಗೊಳ್ಳುತ್ತಿರುವುದು ಪ್ಯಾಸ್ಟಲ್ ಕಲರ್‌ಗಳು. ಅಂದರೆ ಪುದೀನಾ ಹಸಿರು, ಪಿಸ್ತಾ ಹಸಿರು, ತಿಳಿ ಗುಲಾಬಿ, ಪೀಚ್, ತಿಳಿ ನೀಲಿ, ತಿಳಿ ನೇರಳೆ ಇತ್ಯಾದಿ. ಇದಕ್ಕೆ ಒಪ್ಪುವಂತೆ ಗಾಢ ಬಣ್ಣದ, ಎಂಬ್ರಾಯ್ಡರಿ ಕುಸುರಿ ಅಥವಾ ಮಿರರ್ ವರ್ಕ್ ಇರುವ ಡಿಸೈನರ್ ರವಿಕೆಗಳು ಹೆಚ್ಚು ಜನಪ್ರಿಯ.

'ಬ್ಯಾಕ್ ಟು ರೂಟ್ಸ್' ಅನ್ನೋ ಹಾಗೆ ವಯಸ್ಕರಿಂದ ಹಿಡಿದು ಪುಟಾಣಿ ಮಕ್ಕಳವರೆಗೂ ಈ ಸಾಂಪ್ರದಾಯಿಕ ಉಡುಗೆಯೇ ಅಚ್ಚುಮೆಚ್ಚು. ಅದರಲ್ಲೂ 'ಸಾರಿ ಅಪ್‌ಸೈಕ್ಲಿಂಗ್' ಟ್ರೆಂಡ್ ಮಿತಿಮೀರಿ ಜನಪ್ರಿಯತೆ ಪಡೆದುಕೊಳ್ಳುತ್ತಿದೆ. ಹಳೆಯ ಅಥವಾ ಹೆಚ್ಚು ಬಳಸಿದ ಸೀರೆಗಳಿಗೆ ವೆಸ್ಟರ್ನ್ ಲುಕ್ ಕೊಡುವುದು ಈಗಿನ ಟ್ರೆಂಡ್. ಶರ್ಟ್, ಸ್ಕರ್ಟ್, ಮಕ್ಕಳ ಫ್ರಾಕ್, ಲೆಹೆಂಗಾಗಳಲ್ಲಿ ಸೀರೆಯ ಜರಿಯನ್ನು ಬಳಸಿ